ಆ) ಇದರಿಂದಾಗಿ ಸಾರ್ವಜನಿಕರ ಆರೋಗ್ಯಕ್ಕೆ ಧಕ್ಕೆ ಬರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಇ) ಈ ರೀತಿಯ ಕಲಬೆರಕೆ ತಡೆಗಟ್ಟಲು ಕೈಗೊಂಡಿರುವ ಕ್ರಮವೇನು;

ಈ) ಈ ಕ್ಲೋರಲ್ ಹೈಡ್ರೇಟ್ ಅನ್ನು ನಿಷೇಧಿಸುವುದಕ್ಕೆ ಇರುವ ನಿರ್ಭಂಧವೇನು; ಯಾವಾಗ ನಿಷೇಧಿಸಲಾಗುವುದು?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಮೈಸೂರು ನಗರ ಯೋಜನೆಯಡಿಯಲ್ಲಿ ಮಂಜೂರಾತಿ

2573(3415) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ಮೂಡಾ ಮತ್ತು ಮಹಾನಗರ ಪಾಲಿಕೆಗಳಲ್ಲಿ ಪ್ರಾಧಿಕಾರದ ಗಮನಕ್ಕೆ ಬರದಂತೆ ಮತ್ತೊಬ್ಬರಿಂದ ಪಡೆಯುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗಿದ್ದರೆ, ಈ ರೀತಿಯ ಪ್ರಸಂಗ ಮರುಕಳಿಸದಂತೆ ಏನು ಕ್ರಮ ತೆಗೆದುಕೊಳ್ಳಲಾಗಿದೆ;

ಇ) ಈ ರೀತಿ ಮಂಜೂರಾತಿ ಪಡೆಯುವುದರಿಂದ ಸರ್ಕಾರದ ಬೊಕ್ಕಸಕ್ಕೆ ಸಂಭವಿಸುವ ನಷ್ಟ ಎಷ್ಟು; ಇದನ್ನು ತಪ್ಪಿಸಲು ತೆಗೆದುಕೊಂಡಿರುವ ಕ್ರಮವೇನು;

ಈ) ನಗರ ಯೋಜನೆ ಘಟಕ ಇದ್ದರೂ ಸಹ ಎಷ್ಟು ಬಡಾವಣೆಗಳಲ್ಲಿ ಎಷ್ಟು ಕಟ್ಟಡಗಳನ್ನು ಅನಧಿಕೃತವಾಗಿ ಕಟ್ಟಲಾಗಿದೆ; ಅನಧಿಕೃತ ಕಟ್ಟಡ ನಿರ್ಮಾಣದ ವಿರುದ್ಧ ಕೈಗೊಂಡಿರುವ ಕ್ರಮವೇನು;

ಉ) ಈ ರೀತಿ ಅನಧಿಕೃತ ನಿರ್ಮಾಣಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಬಡಾವಣೆಗಳಲ್ಲಿ 11,545 ಅನಧಿಕೃತ ಕಟ್ಟಡಗಳನ್ನು ಕಟ್ಟಲಾಗಿದೆ. ಇನ್ನು ಮುಂದೆ ಯಾವುದೇ ಬಡಾವಣೆಗಳಲ್ಲಿ ಅನಧಿಕೃತ ಕಟ್ಟಡಗಳನ್ನು ನಿರ್ಮಿಸದಂತೆ ನೋಡಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ/ನೌಕರರಿಗೆ ಎಚ್ಚರಿಕೆ ನೀಡಿ ಜವಾಬ್ದಾರಿಯನ್ನು ವಹಿಸಲಾಗಿದೆ.

ಉ) ಸಂಬಂಧಪಟ್ಟ ಅಧಿಕಾರಿಗಳಿಗೆ/ನೌಕರರಿಗೆ ಎಚ್ಚರಿಕೆ ನೀಡಿ ಜವಾಬ್ದಾರಿಯನ್ನು ವಹಿಸಲಾಗಿದೆ.

ರಾಜ್ಯದಲ್ಲಿ ಆರ್.ಟಿ.ಓ. ಕಛೇರಿಗಳ ಕಂಪ್ಯೂಟರೀಕರಣ

2574(3416) ಶ್ರೀ ಗುರುಸ್ವಾಮಿ ಎ.ಎಸ್.(ಚಾಮುಂಡೇಶ್ವರಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಜಿಲ್ಲೆಗಳ ಆರ್.ಟಿ.ಓ. ಕಛೇರಿಗಳನ್ನು ಕಂಪ್ಯೂಟರೀಕರಣಗೊಳಿಸಲಾಗಿದೆ; ಇದಕ್ಕೆ ಆಗಿರುವ ವೆಚ್ಚವೆಷ್ಟು;

ಆ) ಕಂಪ್ಯೂಟರ್ ಖರೀದಿ ಸಂದರ್ಭದಲ್ಲಿ ಪಾರದರ್ಶಕತೆ ನಿಯಮಾವಳಿಯನ್ನು ಅನುಸರಿಸಲಾಗಿದೆಯೇ ಮತ್ತು ಅಗತ್ಯ ಪರೀಕ್ಷೆ ಮಾಡಲಾಗಿದೆಯೇ;

ಇ) ಕಂಪ್ಯೂಟರ್‌ಗಳ ಸರಬರಾಜಿನಲ್ಲಿ ಕಳಪೆ ಗುಣಮಟ್ಟದ ಯಂತ್ರ ಸರಬರಾಜು ಮಾಡಿರುವುದು ಹಾಗೂ ಅದು ನಿರುಪಯುಕ್ತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದರೆ, ಈ ರೀತಿಯ ಕಳಪೆ ಗುಣಮಟ್ಟದ ಕಂಪ್ಯೂಟರ್‌ಗಳನ್ನು ಸರಬರಾಜು ಮಾಡಿದ ಸಂಸ್ಥೆ ಯಾವುದು;

ಈ) ಈ ಕಂಪ್ಯೂಟರ್‌ಗಳಿಗೆ ಗ್ಯಾರಂಟಿ ಅವಧಿ ನೀಡಲಾಗಿದೆಯೇ; ಹಾಗಿದ್ದರೆ, ಎಲ್ಲಿಯವರೆಗೆ ತಾಂತ್ರಿಕ ತೊಂದರೆಗಳನ್ನು ಸರಿಪಡಿಸಲಾಗಿದೆ;

ಉ) ಕಳಪೆ ಗುಣಮಟ್ಟದ ಕಂಪ್ಯೂಟರ್ ಖರೀದಿಗೆ ಕಾರಣರಾದ ಅಧಿಕಾರಿಗಳು ಯಾರು; ಅವರ ವಿರುದ್ಧ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಬಿ. ರಮಾನಾಥ ರೈ (ಸಾರಿಗೆ ಸಚಿವರು) :

ಅ) ಬೆಂಗಳೂರು ನಗರದ 5 ಪ್ರಾದೇಶಿಕ ಸಾರಿಗೆ ಕಛೇರಿಗಳು, ಸಾರಿಗೆ ಆಯುಕ್ತರ ಕಛೇರಿ ಮತ್ತು ಗುಲ್ಬರ್ಗಾ ಪ್ರಾದೇಶಿಕ ಸಾರಿಗೆ ಕಛೇರಿಯನ್ನು ಕಂಪ್ಯೂಟರೀಕರಣಗೊಳಿಸಲಾಗಿದೆ. ಇದಕ್ಕೆ ಆಗಿರುವ ವೆಚ್ಚ:-

ಬೆಂಗಳೂರು ನಗರ	–	ರೂ. 200/-- ಲಕ್ಷ
ಗುಲ್ಬರ್ಗಾ, ಪ್ರಾ.ಸಾ.ಕ.	–	ರೂ. 41.76 ಲಕ್ಷ

ಆ) ಕಂಪ್ಯೂಟರ್ ಖರೀದಿ ಸಂದರ್ಭದಲ್ಲಿ ಪಾರದರ್ಶಕತೆ ನಿಯಮಗಳನ್ನು ಅನುಸರಿಸಲಾಗಿದೆ ಮತ್ತು ಅಗತ್ಯ ಪರೀಕ್ಷೆ ಮಾಡಲಾಗಿದೆ.

ಇ) ಕಂಪ್ಯೂಟರ್ ಸರಬರಾಜಿನಲ್ಲಿ ಕಳಪೆ ಗುಣಮಟ್ಟದ ಯಂತ್ರ ಸರಬರಾಜು ಮಾಡಿರುವುದಿಲ್ಲ ಮತ್ತು ನಿರುಪಯುಕ್ತವಾಗಿರುವುದಿಲ್ಲ.

ಈ) ಕಂಪ್ಯೂಟರ್ ಸರಬರಾಜು ಮಾಡಲಾಗಿರುವ ವಿವಿಧ ಕಂಪನಿಗಳು ಕಂಪ್ಯೂಟರ್‌ಗಳಿಗೆ ಬೇರೆ ಬೇರೆ ಅವಧಿಯ ಗ್ಯಾರಂಟಿ ಅವಧಿ ನೀಡಲಾಗಿದೆ. ಗ್ಯಾರಂಟಿ ಅವಧಿಗೆ ಅಂತ್ಯವಾಗುವವರೆಗೂ ತಾಂತ್ರಿಕ ತೊಂದರೆಗಳನ್ನು ಸರಿಪಡಿಸಲಾಗುತ್ತಿದೆ.

ಉ) ಯಾವುದೇ ಕಳಪೆ ಗುಣಮಟ್ಟದ ಕಂಪ್ಯೂಟರ್‌ಗಳನ್ನು ಖರೀದಿ ಮಾಡಿರುವುದಿಲ್ಲ. ಆದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದ ಪುರಸಭೆಗಳಲ್ಲಿ ಸ್ವಯಂ ಆಸ್ತಿ ತೆರಿಗೆ

2579(3131) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಪುರಸಭೆಗಳಲ್ಲಿ ಸ್ವಯಂ ಆಸ್ತಿ ತೆರಿಗೆ ಘೋಷಣೆಯನ್ನು ಯಾವ ವರ್ಷದಿಂದ ಜಾರಿಗೆ ತರಲಾಗಿದೆ;

ಆ) ಸದರಿ ಪದ್ಧತಿಯನ್ನು ರಾಜ್ಯದ ಎಷ್ಟು ಪುರಸಭೆಗಳು ಅಂಗೀಕರಿಸಿ ಆಚರಣೆಗೆ ತಂದಿವೆ; ಜಿಲ್ಲಾವಾರು ಪುರಸಭೆಗಳ ವಿವರ ಕೊಡುವುದು;

ಇ) ಸ್ವಯಂ ಆಸ್ತಿ ತೆರಿಗೆ ಘೋಷಣೆಯಿಂದ ಮನೆ ಕಟ್ಟಡ ತೆರಿಗೆ ಹಿಂದಿನ 3--4 ಪಟ್ಟು ಹೆಚ್ಚಾಗಿ ಇದರಿಂದ ಪುರಸಭಾ ನಿವಾಸಿಗಳಿಗೆ ತೊಂದರೆಯಾಗಿ ಹೆಚ್ಚಿನ ನಿವಾಸಿಗಳು ತೆರಿಗೆ ಘೋಷಣೆ